**SC No. 72/2020**
**C/w 137/2022**
**P.W. 3**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**SC No. 72/2020 C/w 137/2022 P.W.3**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **13.07.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಪಾಟೀ ಸವಾಲುಃ 2 ನೇ ಆರೋಪಿತರ ಪರ ಶ್ರೀ. **PR** ವಕೀಲರಿಂದ :

1. ತನಿಖಾಧಿಕಾರಯವರು ಈ ಪ್ರಕರಣದಲ್ಲಿ ನನ್ನ ಜೊತೆಗೆ ಸಿಬ್ಬಂದಿಗಳನ್ನು ಕೊಟ್ಟಾಗ ಆ ಬಗ್ಗೆ ಲಿಖಿತ ದಾಖಲೆ ನೀಡಿರುತ್ತಾರೆ. Cr. No. 340/2019 ಕ್ಕೆ ಸಂಬಂಧಪಟ್ಟಂತೆ ನಾನು ಹೇಳುತ್ತಿದ್ದು, ಈ ಪ್ರಕರಣಕ್ಕೆ ಸಂಬಂಧಪಟ್ಟಿದ್ದು ಅಲ್ಲ ಎಂದರೆ ಸರಿ ಅಲ್ಲ. ನಮ್ಮ ಮೇಲಾಧಿಕಾರಿಗಳ ಆದೇಶದಂತೆ ಇನೋವಾ ಕಾರಿನಲ್ಲಿ ಇದ್ದ ವ್ಯಕ್ತಿಗಳನ್ನು ಹಿಡಿಯಲು ಹಿಂಭಾಲಿಸಿಕೊಂಡು ಹೋದೆವು ಎಂದರೆ ಸರಿ. ನಾವು ಅವರನ್ನು ಹಿಡಿಯಲು ಹೋಗುವ ಮೊದಲು ಆ ಇನೋವಾ ಕಾರು ಯಾರಿಗೆ ಸಂಬಂಧಪಟ್ಟಿದ್ದು ಎಂದು ತಿಳಿದುಕೊಂಡೆ. ಘಟನೆ ನಡೆಯುವ ಸಮಯಕ್ಕೆ ಸಂಜೆ 6.05 ಆಗಿತ್ತು.

2. ನನ್ನ ಮೇಲೆ ಚಂದನ್ ಹಲ್ಲೆ ಮಾಡಲು ಪ್ರಯತ್ನ ಪಟ್ಟ. ಆರೋಪಿ ಚರಣ್ ನನ್ನ ಮೇಲೆ ಹಲ್ಲೆ ಮಾಡುವ ಪ್ರಯತ್ನ ಮಾಡಿಲ್ಲ. ನನ್ನ ಜೊತೆಗೆ ಇದ್ದ ಮತ್ತೊಬ್ಬ ಅಧಿಕಾರಿ ಗುಂಡು ಹಾರಿಸುವ ಪ್ರಯತ್ನ ಮಾಡಿದ್ದರು. ನಾನು ಆರೋಪಿ ಚಂದನ್ ಮೇಲೆ 10 ಅಡಿ ದೂರದಿಂದ ಗುಂಡು ಹಾರಿಸಿದ್ದೆ. ನನ್ನ ರಿವಾಲ್ವರ್ ಗೆ ಸಂಬಂಧಪಟ್ಟಂತೆ ನಾನು ಎಲ್ಲೂ ಉಲ್ಲೇಖ ಮಾಡಿಲ್ಲ ಎಂದರೆ ಸರಿ. ನನ್ನ ಪಿಸ್ತೂಲ್ ನ ಸಾಮರ್ಥ್ಯ ಮತ್ತು ಯಾವ ಕಂಪನಿಯದ್ದು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹಾಗೂ ನನ್ನ ಹೇಳಿಕಯಲ್ಲಿ ಹೇಳಿಲ್ಲ ಎಂದರೆ ಸರಿ.

ಪಾಟೀ ಸವಾಲುಃ **1** ನೇ ಆರೋಪಿತರ ಪರ ವಕೀಲರು :

ಗೈರು ಹಾಜರು ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**SC No. 72/2020**
**C/w 137/2022**
**P.W. 3**

<u>ಮರು ವಿಚಾರಣೆಃ ಇಲ್ಲ.</u>

(ಈ ಸಾಕ್ಷಿದಾರರನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.